ಈ) ಆಗಿರದೇ ಇದಲ್ಲಿ ಕಾರಣಗಳೇನು ಮತ್ತೆ ಯಾವಾಗ ಮಾಡಲಾಗುವುದು?

ಶ್ರೀ ಎಚ್.ವಿಶ್ವನಾಥ್ (ಸಹಕಾರ ಸಚಿವರು):

ಅ) ಹೌದು

ಆ) ತನಿಖೆಗಾಗಿ ಬಂದಿರುವ ಅರ್ಜಿಯಲ್ಲಿನ ಅಂಶಗಳ ಬಗ್ಗೆ ಈಗಾಗಲೇ ಕ್ರಮವಹಿಸಿದ್ದರಿಂದ ಆ ಬಗ್ಗೆ ಮತ್ತೆ ವಿಚಾರಣೆಗೆ ಒಳಪಡಿಸುವ ಅವಶ್ಯಕತೆ ಕಂಡುಬರುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ

ರಾಜ್ಯದಲ್ಲಿ ಬೃಹತ್ ನೀರಾವರಿ ಯೋಜನೆಗಳು

637 (5423) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬೃಹತ್ ನೀರಾವರಿ ಯೋಜನೆಗಳು ಹಾಗೂ ಅವುಗಳ ನೀರಾವರಿ ಸಾಮರ್ಥ್ಯ ಎಷ್ಟು (ಯೋಜನೆಗಳಿಗೆ ಅನುಗುಣವಾಗಿ ತಿಳಿಸುವುದು)

ಆ) ಎಷ್ಟು ಬೃಹತ್ ಯೋಜನೆಗಳು ಸಂಪೂರ್ಣಗೊಂಡಿವೆ; ಹಾಗೂ ಬಾಕಿ ಎಷ್ಟು ಉಳಿದಿರುವುವು (ಸ–ಕಾರಣಗಳೊಂದಿಗೆ ತಿಳಿಸುವುದು);

ಇ) ಸದರಿ ಯೋಜನೆಗಳಿಗೆ ಹಾಕಿಕೊಂಡಿರುವ ಕಾಲಮಿತಿ ತಿಳಿಸುವುದು;

ಈ) ಹಾಕಿಕೊಂಡ ಕಾಲಮಿತಿಯೊಳಗೆ ಮುಗಿಯದೇ ಇರುವ ಯೋಜನೆಗಳು ಎಷ್ಟು; (ವಿವರವಾಗಿ ತಿಳಿಸುವುದು):

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ರಾಜ್ಯ ಜಲ ಸಂಪನ್ಮೂಲ ಇಲಾಖೆಯಲ್ಲಿ ಒಟ್ಟು 22 ಬೃಹತ್ ನೀರಾವರಿ ಯೋಜನೆಗಳಿವೆ.

1. ಪೂರ್ಣಗೊಂಡಿರುವ ಯೋಜನೆಗಳು 7
2. ಪ್ರಗತಿಯಲ್ಲಿರುವ ಯೋಜನೆಗಳು 15

ಅ) ರಾಜ್ಯದಲ್ಲಿ ಈವರೆಗೆ ಒಟ್ಟು 7 ಬೃಹತ್ ನೀರಾವರಿ ಯೋಜನೆಗಳು ಪೂರ್ಣಗೊಂಡಿದ್ದು, ಇನ್ನೂ 15 ಯೋಜನೆಗಳು ಪ್ರಗತಿಯಲ್ಲಿವೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಯೋಜನೆಗಳ ಅನುಷ್ಠಾನಕ್ಕಾಗಿ ನಿಗದಿಗೊಳಿಸಲಾದ ಕಾಲಮಿತಿಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಭಾರಿ ನೀರಾವರಿ ಯೋಜನೆಗಳು ಭಾರಿ ಬಂಡವಾಳ ಹೂಡಿಕೆಯ ಮೇಲೆ ಅವಲಂಬಿತವಾಗಿರುವುದರಿಂದ ಮತ್ತು ಅಪಾರ ಭೂಸ್ವಾಧೀನ, ಪುನರ್‌ವಸತಿ, ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಿಂದ ಅನುಮೋದನೆ ಅವಶ್ಯವಿರುವ ಕಾರಣ ಹಾಗೂ ಯೋಜನೆಗಳ ವಿನ್ಯಾಸದಲ್ಲಿ ಬದಲಾವಣೆ ಮಾಡಿರುವ ಕಾರಣಗಳಿಂದ ಯೋಜನೆಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಜಲ ಸಂಪನ್ಮೂಲ ಇಲಾಖೆಯ ಬೃಹತ್ ನೀರಾವರಿ ಯೋಜನೆಗಳು

ಕ್ರ. ಸಂ	ಯೋಜನೆ	ನೀರಾವರಿ ಸಾಮರ್ಥ್ಯ (ಹೆಕ್ಟೇರ್‌ಗಳಲ್ಲಿ)		ಕಾಲಮಿತಿ		ಷರಾ
				ನಿಗದಿತ	ಯೋಜನೆ	
1	2	3	4	5	6	
ಅ)	ಕೃಷ್ಣಾ ಕೊಳ್ಳ					
	ಪೂರ್ಣಗೊಂಡಿರುವ ಯೋಜನೆಗಳು					
1	ತುಂಗಾ ಅಣೆಕಟ್ಟು	8704	1956	–		
2	ತುಂಗಾಭದ್ರಾ ಯೋಜನೆ	415352	1986	–		
3	ವಾಣಿವಿಲಾಸ ಸಾಗರ	9100	1908	–		
4	ಭದ್ರಾ ಜಲಾಶಯ	105570	1966	–		
5	ಘಟಪ್ರಭಾ ಹಂತ–1 & 2	139383	1980	–		
	ಪ್ರಗತಿಯಲ್ಲಿರುವ ಯೋಜನೆಗಳು					
6	ಘಟಪ್ರಭಾ ಹಂತ–3	191386	1975	2005	ಹಂತ–1 & 2 ಪೂರ್ಣಗೊಂಡಿದ್ದು, ಹಂತ–3ರ ಕಾಮಗಾರಿಗಳು ಪ್ರಗತಿಯಲ್ಲಿವೆ.	
7	ಬೆಣ್ಣೆತೋರಾ	20234	1999	2004	ಶೀಘ್ರ ಅನುಷ್ಠಾನಕ್ಕಾಗಿ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸಲಾಗಿದೆ.	
8	ಹಿಪ್ಪರಗಿ	74742	1993	2005	ಯೋಜನೆಯ ಕಾಮಗಾರಿಗಳು ಕರ್ನಾಟಕ ನೀರಾವರಿ ನಿಗಮದಿಂದ ಕೈಗೊಳ್ಳಲಾಗಿದ್ದು, ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು.	
9	ಮಲಪ್ರಭಾ	220028	1981	2004	ಕಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ.	
10	ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ–1 & 2	622033	2001	2005	ಕೃಮೇ.ಯೋ ಘಟ್ಟ–1ರ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ. ಘಟ್ಟ–2ರ ಕಾಮಗಾರಿಗಳು ಪ್ರಗತಿಯಲ್ಲಿವೆ.	
11	ತುಂಗಾ ಮೇಲ್ದಂಡೆ ಯೋಜನೆ	84700	2005	2005	ಆಂಧ್ರ ಪ್ರದೇಶ ಮಾರ್ಗವಾಗಿ, ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.	
12	ಏತನೀರಾವರಿ	47754	1997	2005	ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ.	

1	2	3	4	5	6
13	ಮಾರ್ಕಂಡೇಯ	19105	2002	2005	ಪುನರ್‌ವಸತಿ ಕಾಮಕಾರಿಗಳು ಪ್ರಗತಿಯಲ್ಲಿವೆ.
ಆ)	ಕಾವೇರಿ ಕೊಳ್ಳ				
	ಪೂರ್ಣಗೊಂಡಿರುವ ಯೋಜನೆಗಳು				
14	ಕೃಷ್ಣರಾಜಸಾಗರ	156484	1944	–	
15	ನುಗು ಜಲಾಶಯ	10526	1959	–	
	ಪ್ರಗತಿಯಲ್ಲಿರುವ ಯೋಜನೆಗಳು				
16	ಡಿ.ದೇವರಾಜ ಅರಸು ನಾಲೆ	32375	1979	2005	ಕಾಮಗಾರಿಗಳು ಪ್ರಗತಿಯಲ್ಲಿವೆ.
17	ಹಾರಂಗಿ	54591	1979	2004	ಕಾಮಗಾರಿಗಳು ಪ್ರಗತಿಯಲ್ಲಿವೆ.
18	ಹೇಮಾವತಿ	283596	1995	2005	
19	ಕಬಿನಿ	94434	1964	2005	ಕಾವೇರಿ ಕೊಳ್ಳದ ಅಂತಿಮ ತೀರ್ಪಿಗಾಗಿ ಕಾಯ್ದಿರಿಸಲಾಗಿದೆ.
20	ಯಗಚಿ	21450	1990	2005	
ಇ)	ಗೋದಾವರಿ ಕೊಳ್ಳ				
	ಪ್ರಗತಿಯಲ್ಲಿರುವ ಯೋಜನೆಗಳು				
21	ಕಾರಂಜಾ	35614	1975	2004	ಶೀಘ್ರ ಅನುಷ್ಠಾನಕ್ಕಾಗಿ ಎ.ಐ.ಬಿ.ಸಿ–ಫಾಸ್ಟ್ ಟ್ರ್ಯಾಕ್ ನೆರವಿನಡಿಯಲ್ಲಿ ಕೈಗೊಳ್ಳಲಾಗಿದೆ.
ಈ)	ಇತರೆ ಕೊಳ್ಳಗಳು				
	ಪ್ರಗತಿಯಲ್ಲಿರುವ ಯೋಜನೆಗಳು				
22	ವಾರಾಹಿ	15702	1995	2005	ಶೀಘ್ರ ಅನುಷ್ಠಾನಕ್ಕಾಗಿ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸಲಾಗುವುದು.
	ಒಟ್ಟು	2672863			